ಶ್ರೀ ಸುತ್ತೂರು ಮಠ, ಮೈಸೂರು ಶಾಖೆ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

ಬೆಳದಿಂಗಳ ಸಂಗೀತ 226

ಡಿಜಿಟಲ್ ಮಾಧ್ಯಮ

28 ಜನವರಿ 2021 * ಗುರುವಾರ * ಸಂಜೆ 6.00

ದಿವ್ಯ ಸಾನ್ನಿಧ್ಯ

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

ಗಾಯನ

ಪಂ. ಅಂಬಯ್ಯ ನುಲಿ

ಹಾರ್ಮೋನಿಯಂ

ಪಂ. ವೆಂಕಟೇಶ ಆಲ್ಕೋಡ

ತಬಲ

ಪಂ. ಭೀಮಾಶಂಕರ ಬಿದನೂರ

ಪಂ. ಅಂಬಯ್ಯ ನುಲಿಯವರು ಖ್ಯಾತ ಹಿಂದೂಸ್ತಾನಿ ಹಾಗೂ ಸುಗಮ ಸಂಗೀತ ಕಲಾವಿದರು. ಗಮಕ ಮತ್ತು ರಂಗಗೀತೆ ಕಲಾವಿದರ ಕುಟುಂಬದಲ್ಲಿ ಜನಿಸಿದರು. ರಾಯಚೂರು ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಮೂರು ದಶಕಗಳ ಕಾಲ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ. ಕಲಬುರ್ಗಿ ಆಕಾಶವಾಣಿ ಕೇಂದ್ರದ 'ಎ' ಶ್ರೇಣಿ ಕಲಾವಿದರು. ಇದುವರೆಗೆ ಸುಮಾರು 185ಕ್ಕೂ ಹೆಚ್ಚು ಧ್ವನಿಸುರುಳಿಗಳಲ್ಲಿ ಹಾಡಿರುವುದು ಮತ್ತು 1,500ಕ್ಕೂ ಹೆಚ್ಚು ಗೀತೆಗಳಿಗೆ ರಾಗಸಂಯೋಜನೆ ಮಾಡಿರುವುದು ಇವರ ಪ್ರತಿಭೆಗೆ ಸಾಕ್ಷಿ. ಇವರ ಕಾರ್ಯಕ್ರಮಗಳು ನಾಡಿನ ಹೆಸರಾಂತ ಟಿ.ವಿ. ವಾಹಿನಿಗಳಲ್ಲಿ ಬಿತ್ತರಗೊಂಡಿವೆ. ವಚನಗಳು, ದಾಸರ ಕೀರ್ತನೆಗಳು ಮತ್ತು ಭಾವಗೀತೆಗಳನ್ನು ಕೇಳುಗರು ಮಂತ್ರಮುಗ್ಧರಾಗುವಂತೆ ಹಾಡುತ್ತಾರೆ. ಈ ಟಿ.ವಿ. ವಾಹಿನಿಯ 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮದ ತೀರ್ಪುಗಾರರೂ ಆಗಿದ್ದರು. ಪಂ. ಪುಟ್ಟರಾಜ ಗವಾಯಿಗಳು 'ಇವರ ಧ್ವನಿ ಭಕ್ತಿಭಾವಕ್ಕೆ ಹೇಳಿ ಮಾಡಿಸಿದ ಧ್ವನಿ' ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದರು. ರಾಜ್ಯಮಟ್ಟದ ಸುಗಮ ಸಂಗೀತ ಸಮ್ಮೇಳನ, ಮೈಸೂರು ದಸರಾ ಸಾಂಸ್ಕೃತಿಕ ಕಾರ್ಯಕ್ರಮ ಮೊದಲಾದ ಹಲವಾರು ವೇದಿಕೆಗಳಲ್ಲಿ ಸಂಗೀತವನ್ನು ಪ್ರಸ್ತುತಿ ಪಡಿಸಿದ್ದಾರೆ. ಇವರಿಗೆ ಶಿಕ್ಷಕ ಪ್ರಶಸ್ತಿ, ರಮಣಶ್ರೀ ಪ್ರಶಸ್ತಿ, ಗಾನಕೋಗಿಲೆ ಪ್ರಶಸ್ತಿ, ಸಮಾಜ ಸೇವಾರತ್ನ ಪ್ರಶಸ್ತಿ, ಮೇಘಮಲ್ಹಾರ ಪ್ರಶಸ್ತಿ – ಮೊದಲಾದ ಹನ್ನೆರಡಕ್ಕೂ ಹೆಚ್ಚು ಪುರಸ್ಕಾರಗಳು ಲಭಿಸಿವೆ.

ಪಂ. ವೆಂಕಟೇಶ ಆಲ್ಕೋಡರವರು ಹಿಂದೂಸ್ತಾನಿ ಸಂಗೀತದ ಜೊತೆಜೊತೆಗೆ ದಾಸವಾಣಿ, ವಚನ ಸಂಗೀತ, ತತ್ತ್ವಪದ, ಸುಗಮ ಸಂಗೀತ ಮೊದಲಾದ ಕಾರ್ಯಕ್ರಮಗಳ ಮೂಲಕ ಅಪಾರ ಜನಮನ್ನಣೆ ಸಿದ್ಧಿ ಪಡೆದಿದ್ದಾರೆ. ಗಾಯಕರಾಗಿ ಹಾಗೂ ಸಂಗೀತ ನಿರ್ದೇಶಕರಾಗಿ 30ಕ್ಕೂ ಹೆಚ್ಚು ಧ್ವನಿಸುರುಳಿಗಳನ್ನು ಹೊರತಂದಿದ್ದಾರೆ. 'ಗಾನ ಗಾರುಡಿಗ' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಪಂ. ಭೀಮಸೇನ್ ಜೋಷಿ ಪ್ರಶಸ್ತಿಯೂ ಸೇರಿದಂತೆ ಸುಮಾರು ಏಳು ಪ್ರತಿಷ್ಠಿತ ಪುರಸ್ಕಾರಗಳು ಇವರಿಗೆ ಲಭಿಸಿವೆ.

ಪಂ. ಭೀಮಾಶಂಕರ್ ಬಿದನೂರರವರು ಪಂ. ಶಿವಪುತ್ರಪ್ಪ ಹೂಗಾರ್, ಪಂ. ಕೆ.ಎಸ್. ಹಡಪದ್‌ರವರ ಬಳಿ ಶಿಷ್ಯವೃತ್ತಿ ಮಾಡಿದ್ದಾರೆ. ಕರ್ನಾಟಕ ಸಂಗೀತ ನೃತ್ಯ ಅಕ್ಯಾಡೆಮಿಯ ಬಾಲಪ್ರತಿಭಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿದ್ದಾರೆ. ಪ್ರಸ್ತುತ ಖ್ಯಾತ ವಿದ್ವಾಂಸ ಪಂ. ರವೀಂದ್ರ ಯಾವಗಲ್‌ರವರ ಬಳಿ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ.

ಆನ್‌ಲೈನ್ ಮೂಲಕ ನೇರವಾಗಿ ವೀಕ್ಷಿಸಲು ಸರ್ವರಿಗೂ ಹಾರ್ದಿಕ ಸ್ವಾಗತ

YouTube **http://Youtube.com/c/JSSMahavidyapeethaonline**

f LIVE **https://www.facebook.com/JSSMVP**

http://jssonline.org

LIVE STREAMING

ಬೆಳದಿಂಗಳ ಸಂಗೀತ 227

27 ಫೆಬ್ರವರಿ 2021

ಗಾಯನ

ವಿದ್ವಾನ್ ವಿವೇಕ್ ಸದಾಶಿವಂ

ವಯೊಲಿನ್

ವಿದ್ವಾನ್ ಕೇಶವ ಮೋಹನ್ ಕುಮಾರ್

ಮೃದಂಗ

ವಿದ್ವಾನ್ ಜಿ.ಎಸ್. ರಾಮಾನುಜಂ

ಘಟಂ

ವಿದ್ವಾನ್ ಶಮಿತ್ ಎಸ್. ಗೌಡ

ಫೋನ್: 0821–2548221, 2548223 * ಇಮೇಲ್: sutturmath@jssonline.org